ದೇವಸ್ಥಾನದಿಂದ ಎಣ್ಣೆ ತೆಂಗಿನಕಾಯಿ ಎಲ್ಲಾ ಕದ್ದು ತಂದ ಅಂತ ಕಾಣುತ್ತೆ.'

ಚಂದ್ರು ಮಾತಾಡಲಿಲ್ಲ ತನ್ನ ಅಜ್ಜನನ್ನು ಕಂಡರೆ ಈ ಕರಿಅಜ್ಜ ಹೀಗೇಕೆ ಆಡುತ್ತಾನೆ? ಪಾಪ ಬಿಳಿಅಜ್ಜ ಮನೆ ಕೆಲಸವನ್ನೆಲ್ಲಾ ಮಾಡುತ್ತಿದ್ದ. ಕಟ್ಟಿಗೆ ಒಡೆಯುತ್ತಿದ್ದ. ಬೆಳಿಗ್ಗೆ ಎದ್ದ ಕೂಡಲೆ ಕಾಫಿ ಮಾಡಿಟ್ಟು ಉಬ್ಬಿದ ರೊಟ್ಟಿಯನ್ನೋ ಬರಿ ಅಕ್ಕಿದೋಸೆಯನ್ನೋ ಮಾಡಿಡುತ್ತಿದ್ದ. ಕರಿಅಜ್ಜ ಆರಾಮಾಗಿ ಎದ್ದು, ಎತ್ತುಗಳ ಮೈಸವರಿ, ಎಲಡಿಕೆ ಹಾಕಿಕೊಂಡು, ಊರಿನಲ್ಲೆಲ್ಲಾ ತಿರುಗಾಡಿಕೊಂಡು, ಮಧ್ಯಾಹ್ನ ಹನ್ನೆರಡು ಗಂಟೆಗೆ ದೇವಸ್ಥಾನದ ನಗಾರಿ ಹೊಡೆಯುವ ಹೊತ್ತಿಗೆ ಮನೆಗೆ ಬಂದು, ಸ್ನಾನಾಮಾಡಿ ಊಟಮಾಡಿ ನಿದ್ದೆ ಮಾಡೋದು, ಮತ್ತೆ ಸಂಜೆ ಇಸ್ಪೀಟಾಟೋಕ್ಕೆ ಹೋಗೋದು. ಯಾವಾಗಾಯ್ತೊ ಆವಾಗ ಬಿಳಿಅಜ್ಜನಿಗೆ ಏನಾದ್ರೂ ಅಂತಿರೋದು ಹೀಗೆ ಯೋಚಿಸುತ್ತ ಚಂದ್ರು ಪಡಸಾಲೆಯ ಬಲಗಡೆಗೆ ಹಾಸಿಗೆ ಹಾಸಿಕೊಂಡು ಮಲಗಿದ. ಸ್ವಲ್ಪ ಹೊತ್ತಾದ ಮೇಲೆ ಬಿಳಿಅಜ್ಜ ಅವನ ಪಕ್ಕದಲ್ಲೇ ಹಾಸಿಕೊಂಡು ಮಲಗಿದ. ಅದಾಗಿ ಸ್ವಲ್ಪ ಹೊತ್ತಾದ ಮೇಲೆ ಅಜ್ಜಿ ಪಡಸಾಲೆಯ ಎಡಗಡೆಯಲ್ಲಿದ್ದ ಕೋಣೆಯ ಬಾಗಿಲಿನ ಹತ್ತಿರ ಹಾಸಿಕೊಂಡು ಮಲಗಿದಳು. ಅಜ್ಜಿ ಮಲಗುವಾಗ ಲಾಟೀನನ್ನು ಸಣ್ಣಗೆ ಮಾಡಿದ್ದಳು. 'ಪಾಪ ಬಿಳಿಅಜ್ಜ ದೇವಸ್ಥಾನದ ಹೊರಗಿರುವ ನೀರಿನ ಹೊಂಡದಲ್ಲಿ ಸ್ನಾನಮಾಡಿ, ಒದ್ದೆಪಂಚೆ ಉಟ್ಟುಕೊಂಡು, ಸಹಸ್ರನಾಮಾ ಪಾರಾಯಣಮಾಡಿ ಮಂಗಳಾರತಿ ಆದಮೇಲೆ ಬಂದಿದ್ದ. ನಾಲ್ಕು ಜನರಿಗೆ ಕುಂಕುಮಪ್ರಸಾದ ಕೊಟ್ಟು, ಕುಂಕುಮದ ಪೊಟ್ಟಣವೊಂದನ್ನು ಕಟ್ಟಿಕೊಂಡು, ಅವತ್ತಿನ ನೇವೇದ್ಯಕ್ಕೆ ಒಡೆದಕಾಯಿಗಳನ್ನೂ, ಒಂದು ಬಾಟಲಿಯಲ್ಲಿ ಒಳ್ಳೆಣ್ಣೆಯನ್ನೂ ತೆಗೆದುಕೊಂಡು ಬಿಳಿಅಜ್ಜ ಬರಬಾರದೆ? ದೇವಸ್ಥಾನದಲ್ಲಿ ಹಾಳಾಗುವುದಕ್ಕಿಂತ ಮನೆಗೆ ತಂದರೇನು ತಪ್ಪು?' ಎಂದು ಯೋಚಿಸುತ್ತ ಚಂದ್ರು ನಿದ್ದೆ ಮಾಡಿದ.

★★★

ಮಾರನೆದಿನ ಭಾನುವಾರ, ಚಂದ್ರು ನಡುಮನೆಯಲ್ಲಿದ್ದ ನಾಗೊಂದಿಗೆಗಳ ಮೇಲೆ ಕಣ್ಣಾಡಿಸಿದ. ಬೀಜಕ್ಕೆಂದು ಒಣಗಿಸಿದ ಹೀರೇಕಾಯಿ, ನಾಲ್ಕಾರು ವಾಲೆಗರಿ ಕಟ್ಟುಗಳು ಕಣ್ಣಿಗೆ ಬಿದ್ದವು. ಗೋಡೆಯ ಮೊಳೆಗಳಿಂದ ಎಣ್ಣೆತುಂಬಿದ್ದ ಎರಡು ತೆಂಗಿನ ಬುರುಡೆಗಳು ತೂಗಾಡುತ್ತಿದ್ದವು. ರಿಪೀಸು ದಬ್ಬೆಗಳಿಂದ ಮಾಡಿದ ಒಂದು ಅಟ್ಟದ ಮೇಲೆ ಮೋಡಿಅಕ್ಷರದಲ್ಲಿ ಬರೆದ ಪುಸ್ತಕಗಳು ಮತ್ತು ಹಳೆಯ ಪಂಚಾಂಗಗಳು ಬಿದ್ದಿದ್ದವು. ಅಜ್ಜಿ 'ಏನೋ ಸದ್ದಾಯ್ತು ನೋಡ್ತೋ' ಎಂದಳು. 'ಎಲ್ಲಿ' ಎಂದು ಚಂದ್ರು ಕೇಳಿದ. 'ಹಿತ್ತಲಲ್ಲಿ ಕಣೋ, ಕರು ಏನಾದ್ರೂ ದರೆತುದಿಗೆ ಹೋಗಿ ಬಿತ್ತೋ ಏನೋ' ಎಂದು ಅಜ್ಜಿಯೂ ಹೊರಟಾಗ, ಚಂದ್ರೂ ಕೂಡ ಜೊತೆಯಲ್ಲಿ ಹೊರಟ.

ಐದಾರು ವರ್ಷಗಳ ಹಿಂದೆ ದೊಡ್ಡ ಹಿತ್ತಲಿತ್ತು. ಅಲ್ಲಿ ಹಲಸಿನ ಮರ, ಬಾಳೆಗಿಡಗಳು, ಒಂದು ಮಾವಿನ ಮರ, ಆ ಮರದ ಕೆಳಗೆ ಒಂದು ಚೌಡಿ ಕಲ್ಲಿತ್ತು. ಮನೆ ಊರಿನ ಮಧ್ಯದ ತಗ್ಗಿನಲ್ಲಿದ್ದುದರಿಂದ ಊರಿನ ಚರಂಡಿಗಳ ನೀರೆಲ್ಲ ಚಂದ್ರೂ ಮನೆಯ ಹಿಂದೇ ಹರಿಯುತ್ತಿತ್ತು. ಆಗ ಕರಿಅಜ್ಜ ಈಗ ಇದ್ದಿನಬ್ಯಾರಿ ಅಂಗಡಿ ಇರುವ ಮನೆಯಲ್ಲಿದ್ದ. ಅದು ಕರಿಅಜ್ಜನದೇ ಮನೆ. ಚಂದ್ರೂ ಮನೆಯ ಹಿಂದೆ ಇದ್ದ ಚರಂಡಿಯನ್ನು ದಾಟಿ, ಕರಿಅಜ್ಜನಿಗೆ ಬೆಳಿಗ್ಗೆ ಕಾಫಿ ತಿಂಡಿ, ಮಧ್ಯಾಹ್ನ ಬೆಣ್ಣೆ ಹಾಕಿದ ಉಕ್ಕುಗಂಜಿ ಕೊಟ್ಟು ಬರುತ್ತಿದ್ದದ್ದು ಅವನಿಗೆ ನೆನಪಾಯಿತು. ಬರುಬರುತ್ತ ಊರಿನ ಚರಂಡಿಯ ನೀರು ಕೆಂಪು ಮಣ್ಣನ್ನು ಕೊರೆದು ಕೊರೆದು ಅಲ್ಲೊಂದು ಸಣ್ಣಗುಂಡಿ ಬಿತ್ತು. ಮನೆಯ ಹಿಂದೆ ಇದ್ದ ಸಣ್ಣಗುಂಡಿ ದೊಡ್ಡದಾಗುತ್ತ ಹಿತ್ತಲಿನಲ್ಲಿದ್ದ ಹಲಸು,